ಕರ್ನಾಟಕ ವಿಧಾನ ಸಭೆ
15ನೇ ವಿಧಾನ ಪರಿಷತ್
6ನೇ ಅಧಿವೇಶನ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	338
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ/ಶ್ರೀಮತಿ ಆರ್ ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	06-03-2020
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ ಸಂ	ಪ್ರಶ್ನೆಗಳು	ಉತ್ತರ
1	ಗ್ರಾಮ ಪಂಚಾಯಿತಿಗಳ ಕ್ರಿಯಾಯೋಜನೆಯನ್ನು ಮಂಜೂರು ಮಾಡುವಾಗ ವಿಳಂಬ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
2	ಈ ಹಿಂದೆ ಕ್ರಿಯಾ ಯೋಜನೆಯನ್ನು ತಾಲ್ಲೂಕು ಪಂಚಾಯಿತಿಯ ಆಡಳಿತಾಧಿಕಾರಿಗಳು ಮಂಜೂರು ಮಾಡುತ್ತಿದ್ದು, ಸರ್ಕಾರದ ಆದೇಶ ಪ್ರಕಾರ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ಅಧಿಕಾರ ನೀಡಿರುವುದು ನಿಜವೇ;	ಹೌದು. ಗ್ರಾಮ ಪಂಚಾಯಿತಿಗಳ ಕ್ರಿಯಾಯೋಜನೆಗಳಿಗೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆಯುವ ಬಗ್ಗೆ ಸುತ್ತೋಲೆ ಸಂಖ್ಯೆ: ಗ್ರಾಅಪ 75 ಗ್ರಾಪಸ 2015, ದಿನಾಂಕ: 17.03.2017ನ್ನು ಹೊರಡಿಸಲಾಗಿದೆ.
3	ಈ ಆದೇಶದಿಂದ ಕ್ರಿಯಾಯೋಜನೆ ಮಂಜೂರಾತಿಗೆ ತೊಂದರೆಯಾಗುತ್ತಿದ್ದು, ಈ ಹಿಂದೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಂಜೂರಾತಿ ನೀಡಲು ಅಧಿಕಾರ ನೀಡಲಾಗುವುದೇ?	14ನೇ ಹಣಕಾಸು ಆಯೋಗದ ಅವಧಿಯು ದಿನಾಂಕ: 31.03.2020 ರಂದು ಮುಕ್ತಾಯಗೊಳ್ಳಲಿದ್ದು, 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಮುಂದಿನ ಸಾಲಿನಲ್ಲಿ ಬಿಡುಗಡೆಯಾಗುವ ಅನುದಾನವಕ್ಕೆ ಗ್ರಾಮ ಪಂಚಾಯಿತಿ ಕ್ರಿಯಾಯೋಜನೆ ಅನುಮೋದನೆ ಅಧಿಕಾರವನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಲಾಗುವುದು.

ಸಂಖ್ಯೆ: ಗ್ರಾಅಪಂರಾ 110 ಜಿಪಸ 2020

(ಕೆ ಎಸ್ ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್
ರಾಜ್ ಸಚಿವರು

KARNATAKA LEGISLATIVE ASSEMBLY
15^{TH} LEGISLATIVE COUNCIL
6^{TH} SESSION

Starred Question No.	:	338
Legislative council Member Name	:	Shri. R. Prasanna Kumar Field of local organizations)
Answer Date	:	06-03-2020
To be answered by	:	Hon'ble Minister for Rural Development and Panchayath Raj.

Sl.No	Questions	Answers
(a)	Has the government noticed the delay in sanctioning the gram panchayats Action Plan;	No.
(b)	It is true that taluk panchayat administrators have previously sanctioned the action plan and the chief executive officer of the district panchayat has been empowered by government order;	Yes. Approvalof Zilla Panchayat Chief Executive Officer is required for Action Plans of the Gram Panchayats as per Circular No.RDP 75 GPS 2015 Dated:17-03-2017.
(c)	Case of the said circular the approval of the Gram Panchayati Action Plan are getting delayed. Will the power of Executive Officer to approval Action restored.	14^{th} Finance Commission Grants term is closing on 31.03.2020. Next year funds will be released as per 15^{th} Finance Commission Guidelines, wherein, approval of Action Plan of Gram Panchayat will be limited to Gram Panchats only.

NO:RDPR 121 ZPS 2020

(K.S.Eshwarappa)
Minister for Rural Development and
Panchayath Raj

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಆರ್.ಪ್ರಸನ್ನ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ರವರ ಚುಕ್ಕೆ ಗುರುತಿನ ಸಂಖ್ಯೆ(338).

ಪೂರಕ ಟಿಪ್ಪಣಿ

14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನವನ್ನು ಕೇಂದ್ರ ಸರ್ಕಾರವು ಐದು ವರ್ಷಗಳ ಅವಧಿಗೆ ಅಂದರೆ, 2015-16ನೇ ಸಾಲಿನಿಂದ 2019-20ನೇ ಸಾಲಿನವರೆಗೆ ರೂ.8698.15ಕೋಟಿಗಳನ್ನು ನಿಗಧಿಪಡಿಸಿರುತ್ತದೆ.

(ರೂ. ಕೋಟಿಗಳಲ್ಲಿ)

ವರ್ಷ	**14ನೇ ಹಣಕಾಸು ಆಯೋಗ ಅನುದಾನದ ವಿವರ**	**ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಿದ ಅನುದಾನ (100%)**
2015-16	ಸಾಮಾನ್ಯ ಮೂಲ ಅನುದಾನ 1ನೇ ಕಂತು	501.43
2015-16	ಸಾಮಾನ್ಯ ಮೂಲ ಅನುದಾನ 2ನೇ ಕಂತು	470.93
	ಒಟ್ಟು	**972.36**
2016-17	ಸಾಮಾನ್ಯ ಮೂಲ ಅನುದಾನ 1ನೇ ಕಂತು	684.16
2016-17	ಸಾಮಾನ್ಯ ಮೂಲ ಅನುದಾನ 2ನೇ ಕಂತು	684.04
	ಒಟ್ಟು	**1368.20**
2017-18	ಸಾಮಾನ್ಯ ಮೂಲ ಅನುದಾನ 1ನೇ ಕಂತು	765.64
2017-18	ಸಾಮಾನ್ಯ ಮೂಲ ಅನುದಾನ 2ನೇ ಕಂತು	789.95
	ಒಟ್ಟು	**1555.59**
2018-19	ಸಾಮಾನ್ಯ ಮೂಲ ಅನುದಾನ 1ನೇ ಕಂತು	920.76
2018-19	ಸಾಮಾನ್ಯ ಮೂಲ ಅನುದಾನ 2ನೇ ಕಂತು	920.76
	ಒಟ್ಟು	**1841.52**
2019-20	ಸಾಮಾನ್ಯ ಮೂಲ ಅನುದಾನ 1ನೇ ಕಂತು	1251.85
2019-20	ಸಾಮಾನ್ಯ ಮೂಲ ಅನುದಾನ 2ನೇ ಕಂತು	1252.27
	ಒಟ್ಟು	**2504.12**

ಇದಲ್ಲದೇ ಗ್ರಾಮ ಪಂಚಾಯತಿಗಳ ಕಾರ್ಯದ ಆಧಾರದ ಮೇಲೆ ಕಾರ್ಯಕ್ಷಮತೆ ಅನುದಾನವನ್ನು ಕೇಂದ್ರ ಸರ್ಕಾರವು 2016-17ನೇ ಸಾಲಿಗೆ ರೂ.182.15ಕೋಟಿ ಹಾಗೂ 2017-18ನೇ ಸಾಲಿಗೆ ರೂ.206.13ಕೋಟಿಗಳನ್ನು ನಿಗಧಿಪಡಿಸಿರುತ್ತದೆ.

(ರೂ. ಕೋಟಿಗಳಲ್ಲಿ)

ವರ್ಷ	**ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಿದ ಅನುದಾನ (100%)**
2016-17	179.45
2017-18	204.07

2018-19 ಮತ್ತು 2019-20ನೇ ಸಾಲಿಗೆ ಕಾರ್ಯಕ್ಷಮತೆ ಅನುದಾನ ಬಿಡುಗಡೆಗೆ ಕೇಂದ್ರ ಸರ್ಕಾರದಲ್ಲಿ ಬಾಕಿ ಉಳಿದಿರುತ್ತದೆ. 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಈ ಕಛೇರಿಯ ಸುತ್ತೋಲೆ ಸಂಖ್ಯೆ:ಗ್ರಾಅಪ 75 ಗ್ರಾಪಸ 2015, ದಿನಾಂಕ:08-02-2016ರಂದು ಬಿಡುಗಡೆಯಾದ ಅನುದಾನದ ಬಳಕೆಯ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ನಂತರ, ಆಂತರಿಕವಾಗಿ ಆರ್ಥಿಕ ಇಲಾಖೆಯ ಅಭಿಪ್ರಾಯದಂತೆ ಈ ಕಛೇರಿಯ ಸುತ್ತೋಲೆ ಸಂಖ್ಯೆ:ಗ್ರಾಅಪ 75 ಗ್ರಾಪಸ 2015, ದಿನಾಂಕ: 17-03-2017ರಂದು ಸುತ್ತೋಲೆಯನ್ನು ಮಾರ್ಪಡಿಸಿ ಗ್ರಾಮ ಪಂಚಾಯತಿಗಳು ಕ್ರಿಯಾಯೋಜನೆಯನ್ನು

ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದು, ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಕಡ್ಡಾಯವಾಗಿ ಅನುಮೋದನೆ ಪಡೆಯಬೇಕೆಂದು ಸೂಚಿಸಲಾಗಿದೆ. ಈ ಕ್ರಮವು ಸರ್ಕಾರವು ಹೊರಡಿಸಿರುವ ಸುತ್ತೋಲೆಯಲ್ಲಿ ನಿಗಧಿಪಡಿಸಿರುವ ಶೇಕಡಾವಾರು ಕಾಮಗಾರಿಗಳು ವ್ಯತ್ಯಾಸವಾಗದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ಪರಿಶೀಲನೆಗೆ ಒಳಗಾಗಲು ಸೂಕ್ತವೆಂದು ಭಾವಿಸಿ ಹೊರಡಿಸಲಾಗಿದೆ.

14ನೇ ಹಣಕಾಸು ಆಯೋಗದ ಅನುದಾನಕ್ಕೆ 2019–20ನೇ ಸಾಲು ಕೊನೆಯ ವರ್ಷವಾಗಿರುತ್ತದೆ. ಈಗಾಗಲೇ ಹೊರಡಿಸಿರುವ ಸುತ್ತೋಲೆಯು ದಿನಾಂಕ:31–03–2020ಕ್ಕೆ ಕೊನೆಗೊಳ್ಳುತ್ತದೆ. ದಿನಾಂಕ:01–04–2020ರಿಂದ ಜಾರಿಗೆ ಬರುವಂತೆ 15ನೇ ಹಣಕಾಸು ಆಯೋಗದ ಅನುದಾನವು ಬಿಡುಗಡೆಯಾಗಬೇಕಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಮಾರ್ಗಸೂಚಿಗಳನ್ನು 15ನೇ ಹಣಕಾಸು ಆಯೋಗವು ಹೊರಡಿಸುವಂತಹ ಮಾರ್ಗಸೂಚಿ ಮತ್ತು ಅದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರವು ಹೊರಡಿಸುವಂತಹ ಮಾರ್ಗಸೂಚಿಯನ್ನು ಅವಲಂಬಿಸಿರುತ್ತದೆ. ಇವುಗಳ ಆಧಾರದ ಮೇಲೆ ಸರ್ಕಾರದಿಂದ ಸುತ್ತೋಲೆಯನ್ನು ಹೊರಡಿಸಲಾಗುವುದು.

ಗ್ರಾಅಪ 121 ಜಿಪಸ 2020